# ಜನರ ಕಷ್ಟದಲ್ಲಿ ಭಾಗಿಯಾಗುವುದು ಇಷ್ಟ

## ಅಜಯ್
### ಸ್ಟಾರ್ ಸುವರ್ಣದ 'ಮನಸು ಹೂವಾಗಿದೆ'ಯ ವಿಶಾಲ್

◆ **ಕೊರೊನಾ ಹಾವಳಿಯ ಈ ಹೊತ್ತು ಹೇಗೆ ಕಳೆಯುತ್ತಿದೆ?**

ಚಿತ್ರೀಕರಣ ಮಾಡುತ್ತಿಲ್ಲ ಇದು ಪ್ರಮುಖ ನಷ್ಟ. ಮನೆಯಲ್ಲಿಯೇ ಕುಟುಂಬದ ಜೊತೆ ಅರ್ಥಪೂರ್ಣವಾಗಿ ಸಮಯವನ್ನು ಕಳೆಯುತ್ತಿದ್ದೇನೆ. ರೋಗ ನಿಯಂತ್ರಣಕ್ಕೆ ಅಗತ್ಯವಾಗಿ ಹೀಗಿರಲೇಬೇಕು. ಬೆಳಿಗ್ಗೆ ಸ್ವಲ್ಪ ಹೊತ್ತು ವ್ಯಾಯಾಮ ಮಾಡುತ್ತೇನೆ. ಉಳಿದಂತೆ ಮನೆ ಕೆಲಸಕ್ಕೆ ಸಮಯವನ್ನು ವಿನಿಯೋಗ ಮಾಡಿಕೊಳ್ಳುತ್ತೇನೆ. ಟೀವಿ ನೋಡುತ್ತೇವೆ. ಸಿನಿಮಾ ನೋಡಲು ಹೆಚ್ಚು ಸಮಯ ಸಿಗುತ್ತಿದೆ. ಬೋರ್ ಅಂತ ಎಂದು ಅನ್ನಿಸುವುದೇ ಇಲ್ಲ.

◆ **ಕಲಾ ಜೀವನ ಹೇಗೆ ಆರಂಭ ಆಯಿತು?**

ಕಾಲೇಜು ದಿನಗಳಲ್ಲಿಯೇ ಚಿಗುರು ಒಡೆದ ಕನಸು. ಡಾನ್ಸ್ ಮಾಡುತ್ತಿದ್ದೆ. ನಟನೆ ಆಸೆಯಿಂದಲೇ ವೃತ್ತಿಪರ ಡಾನ್ಸರ್ ಆಗಬೇಕು ಎಂದು ಅಭ್ಯಾಸ ಮಾಡುತ್ತಿದ್ದೆ. ನೃತ್ಯ ನಟನೆಗೆ ಬೆನ್ನೆಲುಬಾಗಿ ಪೋಷಿಸುತ್ತದೆ ಎನ್ನುವುದು ನನ್ನ ಅಂದಾಜಾಗಿತ್ತು. ಕಾಲೇಜಿನಲ್ಲಿ ಎನ್‌ಎಸ್‌ಎಸ್‌ನಲ್ಲಿ ತೊಡಗಿದ್ದರಿಂದ ಸಾಂಸ್ಕೃತಿಕ ಚಟುವಟಿಕೆಗಳು ಹೆಚ್ಚಾಗಿದ್ದವು. ಅನೇಕ ಬೀದಿ ನಾಟಕಗಳನ್ನು ಆಡುತ್ತಿದ್ದೆವು. ಆ ಸಮಯ ನಟನೆಯನ್ನು ಕಲಿಯಲು ಸಾಧ್ಯವಾಯಿತು. ಬಿಕಾಂ ಮುಗಿಯುತ್ತಿದ್ದಂತೆ ಕೆಲಸ ಮಾಡುವ ಅನಿವಾರ್ಯತೆ ಬಂತು. ಐದಾರು ವರ್ಷ ಕೆಲಸ ಮಾಡಿದೆ. ಅದರ ಜೊತೆ ಸಣ್ಣ ಪುಟ್ಟ ಪಾತ್ರ ಮಾಡಿದೆ. 'ಸೀತೆ' ಧಾರಾವಾಹಿಯಲ್ಲಿ ಅಂತಹ ಅವಕಾಶ ಮೊದಲು ಸಿಕ್ಕಿತ್ತು. 'ಲವಕುಮಾರ' ಸಿನಿಮಾ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿ ಹಗಲು ಅಭಿನಯವನ್ನು ಮಾಡುತ್ತಿದ್ದೆ. ಸಿನಿಮಾ ಅರ್ಧಕ್ಕೆ ನಿಂತು ಹೋಯಿತು. ಆ ಅವಧಿಯಲ್ಲಾಗಲೇ ಒಂದು ಕೆಲಸವನ್ನು ಕಳೆದುಕೊಂಡು ಮತ್ತೊಂದು ಕೆಲಸವನ್ನೂ ಕಳೆದುಕೊಂಡೆ. ಕೆಲಸ ನನಗೆ ಆಗುವುದಿಲ್ಲ ಎಂದು ಪೂರ್ಣಾವಧಿ ನಟನಾಗುವ ಬಗ್ಗೆ ಯೋಚಿಸಿದೆ. ಅದೇ ಸಮಯಕ್ಕೆ ಮತ್ತೊಂದು ಸಿನಿಮಾದಲ್ಲಿ ಕೆಲಸ ಮಾಡಿದೆ ಅದೂ ಅರ್ಧಕ್ಕೆ ನಿಂತಿತು. ನನ್ನ ಗೆಳೆಯ ಕೆಲವೊಂದು ಇ–ಮೇಲ್ ವಿಳಾಸವನ್ನು ನೀಡಿದ. ಅವನು ನೀಡಿದ ವಿಳಾಸಕ್ಕೆಲ್ಲ ಮೇಲ್ ಮಾಡಿದೆ. 'ಪ್ರಿಯದರ್ಶಿನಿ'ಗೆ ಪ್ರಮುಖ ಪಾತ್ರ ಗಿಟ್ಟಿಸಿದೆ. ಅಲ್ಲಿಂದ ಇಲ್ಲಿಯ ತನಕ ನಟಿಸುತ್ತಿದ್ದೇನೆ. ಒಂಬತ್ತು ಧಾರಾವಾಹಿಯನ್ನು ಮಾಡಿದ್ದೇನೆ. ಎಲ್ಲ ಪ್ರಮುಖ ಪಾತ್ರಗಳನ್ನೇ ಮಾಡಿದ್ದೇನೆ. ಇದರ ಜೊತೆ ಎರಡು ಸಿನಿಮಾಗಳಲ್ಲಿ ನಟಿಸುವ ಅವಕಾಶ ಸಿಕ್ಕಿದೆ.

◆ **ಅಭಿನಯ ಸಂಕಷ್ಟದ ದಡ ದಾಟಿಸುತ್ತೆ ಎಂಬ ಭರವಸೆ ಹುಟ್ಟಿಸಿದ್ದು ಹೇಗೆ?**

ಎಂಎನ್‌ಸಿಯಲ್ಲಿ ಐದು ವರ್ಷ ಕೆಲಸ ಮಾಡಿದಾಗ ಅಲ್ಲಿ ಅಂತಹ ಬೆಳವಣಿಗೆ ಇಲ್ಲ ಎನ್ನುವುದು ಮನದಟ್ಟಾಗಿತ್ತು. ಕಾಲೇಜು ದಿನಗಳಲ್ಲಿಯೇ ನಟನೆಯಲ್ಲಿ ತೊಡಗಬೇಕು ಎನ್ನುವ ಯೋಚನೆ ಇತ್ತು. ಎಲ್ಲಾ ಕಡೆ ಅದರದೇ ಆದ ಅಡ್ಡಿ ಆತಂಕಗಳು ಇರುತ್ತವೆ. ಅಭಿನಯ ನನ್ನ ಆಸಕ್ತಿಯ ಕ್ಷೇತ್ರ. ಕೆಲಸಕ್ಕೆ ಯಾವುದೋ ಒತ್ತಡಕ್ಕೆ ಸೇರಿದ್ದೆ. ಅರೆ ಮನಸ್ಸಿನಿಂದ ಕೆಲಸ ಮಾಡುವುದು ಬಿಡಬೇಕು ಎಂದೆನಿಸಿತು. ಇಲ್ಲಿ ಕೆಲ ಅನುಭವಿ ನಟರು ಬಣ್ಣದ ಜಗತ್ತಿನ ಸಂಕಷ್ಟವನ್ನು ಹೇಳಿದ್ದರು. ಯಾವುದು ಸುಲಭ ಅಲ್ಲ ಎಂದು ಕಲಾ ಜೀವನವನ್ನೇ ಆಯ್ಕೆ ಮಾಡಿಕೊಂಡು ಎಂಟು ವರ್ಷ ಆಯಿತು. ಮುಂದೆ ನಿರ್ದೇಶನ ಮಾಡಬೇಕು, ಸಿನಿಮಾ ಕತೆಗಳನ್ನು ಬರೆಯಬೇಕು ಎನ್ನುವ ಯೋಚನೆ ಇದೆ. ಅಂತಹ ಅವಕಾಶಕ್ಕೆ ಎದುರು ನೋಡುತ್ತಿದ್ದೇನೆ.

◆ **ಎಂತಹ ಪಾತ್ರಗಳು ನಿಮಗೆ ಇಷ್ಟ ಆಗುತ್ತವೆ?**

ಮೊದಲು ನನಗೆ ಮೃದು ಮನಃಸ್ಥಿತಿಯ ಪಾತ್ರಗಳನ್ನೇ ನೀಡುತ್ತಿದ್ದರು. ಈ ಹಿಂದಿನ ಎಂಟು ಧಾರಾವಾಹಿಗಳನ್ನು ಸೇರಿದಂತೆ ಹೇಳುವುದಾದರೆ ಜೀವ ಹೂವಾಗಿದೆಯ ವಿಶಾಲ್ ಪಾತ್ರ ಸೇರಿ ಮೂರು ಪಾತ್ರಗಳು ಹೆಚ್ಚು ಇಷ್ಟವಾಗಿವೆ. ಜೀವನ್ ಪಾತ್ರ ರಫ್ ಅಂಡ್ ಟಫ್. ಆದರೆ ಮನೆಯ ಸದಸ್ಯರ ಜೊತೆ ಮೃದುವಾಗಿರಬೇಕು. 'ಪಂಚಕಜ್ಜಾಯ' ಎಂಬ ಹಾಸ್ಯ ಧಾರಾವಾಹಿಯ ಪಾತ್ರ ಇಷ್ಟ ಆಗಿತ್ತು. ಹಾಸ್ಯ ನೋಡಲು ತುಂಬ ಸರಳ ಆದರೆ ನಟಿಸುವುದು ಕಠಿಣ. ಅದನ್ನು ಕಲಿಯಲು ಸಮಯ ಹಿಡಿಯಿತು. ಅದರಲ್ಲಿ 'ಕಿನ್ನರಿ'ಯಲ್ಲಿ ವಿಲನ್ ಆಗಿ ನಟಿಸಿದ್ದೂ ತುಂಬ ಖುಷಿ ಕೊಟ್ಟಿದೆ. ಮಾನಸಿಕ ಸಮಸ್ಯೆಗಳನ್ನು ಪ್ರತಿನಿಧಿಸುವ ಪಾತ್ರ ಇಷ್ಟ ಆಗುತ್ತವೆ.

◆ **ಎನ್‌ಎಸ್‌ಎಸ್ ವಿದ್ಯಾರ್ಥಿ ಈಗ ಸಮಾಜದ ಜೊತೆ ಸಂಬಂಧವನ್ನು ಹೇಗೆ ಬೆಸೆದುಕೊಂಡಿದ್ದೀರಿ?**

ಜನರ ಜೊತೆ ಬೆರೆಯಲು ಇಷ್ಟಪಡುತ್ತೇನೆ. ನಮ್ಮ ಮನೆಗೆ ಹಾಲು ತರಕಾರಿ ಕಿರಾಣಿ ನಾನೇ ತರುತ್ತೇನೆ. ಆಗ ಯಾರಾದರೂ ಗುರುತಿಸಿ ಮಾತನಾಡಿದರೆ ಮಾತ್ರ ಅಭಿನಯದ ಬಗ್ಗೆ ಮಾತನಾಡುತ್ತೇನೆ. ಅವರು ನೈಜ ವಿಮರ್ಶೆಯನ್ನು ಮಾಡುತ್ತಾರೆ ಎಂದುಕೊಂಡಿದ್ದೇನೆ. ಜನರ ಕಷ್ಟ ಸುಖದಲ್ಲಿ ಭಾಗಿಯಾಗುವುದು ಇಷ್ಟ. ನಮ್ಮ ಪಾತ್ರದಲ್ಲಿ ಬದಲಾವಣೆ ತಂದುಕೊಳ್ಳಲು ಅವರೇ ಸಹಾಯ ಮಾಡುತ್ತಾರೆ. ಸಾಮಾಜಿಕ ಮಾಧ್ಯಮಗಳೂ ನನ್ನ ಅಭಿನಯದ ಬಗ್ಗೆ ಕೇಳುತ್ತೇನೆ. ದೋಷವನ್ನು ಹೆಚ್ಚು ಪರಿಗಣಿಸುತ್ತೇನೆ. ನಮ್ಮ ಮನೆಯ ಹತ್ತಿರದಲ್ಲೇ ಕ್ರಿಕೆಟ್ ಆಡುತ್ತೇನೆ. ನಾನು ಇರುವುದೇ ಜನರನ್ನು ರಂಜಿಸಲು ಎಂದು ನಾನು ಅಂದುಕೊಂಡಿದ್ದೇನೆ. ನನ್ನದೇ ಆದ ಯಾವ ಕೆಲಸ ಇಲ್ಲ ಎಂದಾಗ ನನ್ನ ಸ್ನೇಹಿತನ ಸ್ಯಾಂಡ್‌ವಿಚ್ ಅಂಗಡಿಯಲ್ಲಿ ಇರುತ್ತೇನೆ. ಅಲ್ಲಿ ಒಬ್ಬ ಕೆಲಸಗಾರನಂತೆ ಬ್ರೆಡ್ ರೋಸ್ಟ್ ಮಾಡುವುದು, ಪಾರ್ಸಲ್ ಕಟ್ಟಿಕೊಡುವುದನ್ನು ಮಾಡುತ್ತೇನೆ. ಅಲ್ಲಿಗೆ ಬರುವ ಗ್ರಾಹಕರೂ ಗುರುತು ಹಿಡಿದರೆ ತುಂಬ ಪ್ರೀತಿಯಿಂದ ಮಾತನಾಡಿಸುತ್ತಾರೆ. ನಟನೆ ಸೇರಿದಂತೆ ನನ್ನ ಬಗ್ಗೆ ವಿಚಾರಿಸುತ್ತಾರೆ.

◆ **ಜೀವ ಹೂವಾಗಿದೆಗೆ ಸಂಬಂಧಿಸಿದಂತೆ ವೀಕ್ಷಕರಿಂದ ಎಂತಹ ಅಭಿಪ್ರಾಯ ಬಂದಿವೆ?**

ಇಲ್ಲಿ ಎರಡು ರೀತಿಯ ಪಾತ್ರಗಳಿವೆ. ಅಣ್ಣನ ಪಾತ್ರ ಸಾಫ್ಟ್, ನಾನು ಒರಟ ಆದರೂ ಮೃದು ಧೋರಣೆ ಇರುತ್ತದೆ. ನಾನು ಯಾರನ್ನೇ ಆದರೂ ಎದುರು ಹಾಕಿಕೊಳ್ಳಲು ಸಿದ್ಧ. ಆದರೆ ನನ್ನನ್ನು ಪ್ರೀತಿಸುವ ಹುಡುಗಿ ನನಗೆ ಇಷ್ಟ ಇಲ್ಲ ಎಂದು ನಿರಾಕರಿಸುತ್ತೇನೆ. ಜನ ಅದನ್ನು ಪ್ರಶ್ನಿಸುತ್ತಾರೆ. ನಿಮ್ಮ ಹಿಂದೆ ಆ ಹುಡುಗಿ ಬಿದ್ದಿದ್ದರೂ ಏಕೆ ನೀವು ಪ್ರೀತಿಸಲ್ಲ ಎನ್ನುತ್ತಾರೆ ಮೋಹಕ್ಕೆ ಬೀಳುವ ಸಂದರ್ಭ ಮುಂದೆ ಇದೆ.




■ ರಾಘವೇಂದ್ರ ಕೆ.